ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೧೩

ಅಧ್ಯಕ್ಷರು.—ಖಂಡ ೨ ರಿಂದ ೧೩ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಮತ್ತು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ".

(ಪ್ರಸ್ತಾವನ್ನು ಅಂಗೀಕರಿಸಲಾಯಿತು)

(ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ''೧೯೪೭ರ ಕರ್ನಾಟಕ ವ್ಯವಸಾಯ ಆದಾಯ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೪೭ರ ಕರ್ನಾಟಕ ವ್ಯವಸಾಯ ಆದಾಯ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೪೭ರ ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ ೧೯೪೭ರ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೪೭ರ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೆ ೧೯೪೭ರ ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. *

೧೯೮೭ರ ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ ೧೯೮೭ರ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಪಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದ ಪುಟ ೬೧ರಲ್ಲಿ ವಿವರವಾಗಿ ಹೇಳಿದ್ದಾರೆ. ಈ ಸ್ಟ್ಯಾಂಪ್ಸ್ ವಿಧೇಯಕವನ್ನು ನಾವು ಈಗ ತಿದ್ದುಪಡಿ ಮಾಡಿರುವುದರಿಂದ ಸರ್ಕಾರಕ್ಕೆ ಈಗ ಹೆಚ್ಚು ಆದಾಯ ಬರುತ್ತದೆ. ಕೆಲವು ಶುಲ್ಕಗಳನ್ನು ಬಹಳ ವರ್ಷಗಳಿಂದಲೂ ಹೆಚ್ಚಿಗೆ ಮಾಡಿರಲಿಲ್ಲ. ಈಗ ನಾವು ಅಗ್ರಿಮೆಂಟ್ ಬಗ್ಗೆ ಶುಲ್ಕವನ್ನು ಹೆಚ್ಚು ಮಾಡಿದ್ದೇವೆ. ಈ ವಿಧೇಯಕದಿಂದ ರಾಜ್ಯದ ಜನರಿಗೆ ಹೆಚ್ಚು ಕರಭಾರವೇನೂ ಬೀಳುವುದಿಲ್ಲ. ಆದ್ದರಿಂದ ದಯವಮಾಡಿ ಇದಕ್ಕೆ ತಮ್ಮ ಬೆಂಬಲವನ್ನು ಕೊಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಪುಂಡಿಸಿರ ತಕ್ಕಂಥ ವಿಧೇಯಕದಲ್ಲಿ ಹೆಚ್ಚು ಕರಭಾರ ಬೀಳುವುದಿಲ್ಲವೆನ್ನುವ ಮಾತನ್ನು ಹೇಳಿದರು. ಮತ್ತು ಬಹಳ ದಿವಸಗಳ ನಂತರ ಹೆಚ್ಚು ಮಾಡಿರುವ ಟ್ಯಾಕ್ಸ್ ಎಂದೂ ಸಹ ಹೇಳಿದ್ದಾರೆ ನೀವು ಅಧಿಕಾರಕ್ಕೆ ಬಂದ ಮೇಲೆ ಹೆಚ್ಚು ಹೆಚ್ಚು ಕರಭಾರ ಹಾಕುವುದೇ ಆಗಿದೆ. ಆದರೆ ಸರ್ಕಾರದವರು ಒಂದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಅದೇನೆಂದರೆ ಡಾಕ್ಯುಮೆಂಟ್ಸ್ ಎಕ್ಸಿಕ್ಯೂಟ್ ಮಾಡತಕ್ಕಂಥವರು ಹಳ್ಳಿಯ ರೈತರು. ಅವರ ಮೇಲೆ ಕರಭಾರವೇನೂ ಬೀಳುವುದಿಲ್ಲವೇ ? ಅದರಲ್ಲೂ ವಿಶೇಷವಾಗಿ ವಂಶ್ಯಳು ಅಫಿಡವಿಟ್ ಮಾಡಿಸುವ ಪ್ರಮೇಯ ಬರುತ್ತದೆ. ಅವರು ೫ ರೂಪಾಯಿಗಳ ಸ್ಟ್ಯಾಂಪ್ ಪೇಪರ್‌ಗೆ ಬದಲಾಗಿ ೧೦ ರೂಪಾಯಿಗಳ ಸ್ಟ್ಯಾಂಪ್ ಪೇಪರ್ ತೆಗೆದುಕೊಳ್ಳಬೇಕಾಗುತ್ತದೆ. ಅದೇ ರೀತಿ ಯಲ್ಲಿ ಅಂಗ್ರಿಮೆಂಟಿಗೂ ಸಹ ೧೦ ರೂಪಾಯಿಗಳನ್ನು ಮಾಡಿದ್ದೀರಿ. ಇದರಿಂದ ನನಗನಿಸಿದ ಮಟ್ಟಿಗೆ ಒಂದು ವರ್ಷದಲ್ಲಿ ಸುಮಾರು, ೬೧ ಕೋಟಿ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತದೆ. ಇದರಲ್ಲಿ ಕನಿಷ್ಟ ಪಕ್ಷ ೫೦-೫೫ ಕೋಟಿ ರೂಪಾಯಿಗಳಷ್ಟು ಹಣ ಸೋರಿ ಹೋಗುತ್ತದೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರವೇನು ಕಾರ್ಯಕ್ರಮ ಇದುವರೆವಿಗೂ ಕೈಗೊಂಡಿಲ್ಲ. ಮಾನ್ಯ ಅಧ್ಯಕ್ಷರೇ ತಾವು ಸಹ ವಕೀಲರು, ಮಾನ್ಯ ಮಂತ್ರಿಗಳೂ ಸಹ ವಕೀಲರು. ಒಂದು ವರ್ಷದಲ್ಲಿ ನಮ್ಮ ರಾಜ್ಯದ ಆದಾಯದಲ್ಲಿ ಎಷ್ಟು ಸೋರಿ ಹೋಗುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ ತಾವೇನು ಕ್ರಮ ತೆಗೆದು ಕೊಂಡಿದ್ದೀರಿ ? ಯಾವ ಕ್ರಮವನ್ನು ಸಹ ತಾವು ತೆಗೆದುಕೊಂಡಿಲ್ಲ. ಅದು ಬಿಟ್ಟು ಈ ತಿದ್ದುಪಡಿ ಈಗ ತರುವಂತಹ ಆವಶ್ಯಕತೆ ಇರಲಿಲ್ಲ. ಈ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಗ್ರೇಡ್ ಒಂದರಲ್ಲಿ ೫೫ ಜನರಿದ್ದಾರೆ. ಗ್ರೇಡ್ ಎರಡರಲ್ಲಿ ೧೪೩ ಜನ ಇದ್ದಾರೆ. ಇವರಲ್ಲಿ ಯಾರನ್ನಾದರೂ ಕ್ಲಾಸ್ ಒಂದು ಮಾಡಿ ಪ್ರಮೋಷನ್ ಕೊಟ್ಟು ನೀವು ಹೋಗಿ ಎಂದು ಹೇಳಿದರೆ ಯಾರೂ ಹೋಗುವುದಿಲ್ಲ. ಕಾರಣ ತಮಗೇ ಗೊತ್ತಿದೆ. ಆದ್ದರಿಂದ ಇಪ್ಪತ್ತು ಸೋರಿ ಹೋಗುತ್ತಿರುವ ರೆವಿನ್ಯೂ ತಡೆಗಟ್ಟಬೇಕು. ತಾವು ಕಾಫಿ, ಟೀ ಯಾವುದರ ಮೇಲೂ ರಿಯಾಯಿತಿ ತೋರಿಸಲಿಲ್ಲ. ಈ ರೆವಿನ್ಯೂ ಡಿಮ್ಯಾಂಡ್ ಬಂದಾಗ ಹೇಳೋಣವೆಂದರೆ ಅದೂ ಸಹ ಪಾಸಾಗಿ ಹೋಯಿತು. ಈ ಒಂದು ಬಾಬಿನಿಂದ ಸುಮಾರು ೬೦ ಕೋಟಿ ರೂಪಾಯಿಗಳು ನೆಟ್ ಇನ್‌ಕಮ್ ಬಂದರೆ ಅದರಲ್ಲಿ ೫೫ ಕೋಟಿ ರೂಪಾಯಿಗಳಷ್ಟು ಸೋರಿ ಹೋಗುತ್ತಿದೆ. ಇದನ್ನು ತಡೆಗಟ್ಟಿದರೆ ಬೇಕಾದಷ್ಟು ಲಾಭ ಬರುತ್ತದೆ. ಸೋರಿ ಹೋಗುವ ಹಣ ವನ್ನು ತಡೆಗಟ್ಟಿದರೆ ಸಾಕು ನೀವು ಎನ್‌ಹ್ಯಾನ್ಸ್ ಮಾಡಿರುವ ಹಣ ಬಂದುಬಿಡುತ್ತದೆ. ಎಷ್ಟು ಬೆಲೆಗೆ ರಿಜಿಸ್ಟ್ರೇಷನ್ ಮಾಡಿಸಬೇಕೋ ಅದಕ್ಕಿಂತ ಕಡಿಮೆ ಬೆಲೆಗೆ ರಿಜಿಸ್ಟ್ರೇಷನ್ ಮಾಡಿರುವ ೬೦-೬೫

ಕೇಸ್‌ಗಳನ್ನು ಇವರು ಡಿಟೆಕ್ಟ್ ಮಾಡಿದ್ದಾರೆ. ಅದರಲ್ಲಿ ೫೧,೩೩೦ ಕೇಸ್‌ಗಳನ್ನು ಡಿಸ್‌ಪೋಸ್ ಮಾಡಿದ್ದಾರೆ. ಇನ್ನು ೧೧,೪೬೫ ಕೇಸ್‌ಗಳನ್ನು ಡಿಸ್‌ಪೋಸ್ ಮಾಡದೆ ಬ್ಯಾಲೆನ್ಸ್ ಇಟ್ಟುಕೊಂಡಿದ್ದಾರೆ. ಡಿಸ್‌ಪೋಸ್ ಮಾಡಿದ ಕೇಸ್‌ಗಳಿಂದ ೫೬ ಲಕ್ಷ ೬೫ ಸಾವಿರದ ೧೨೮ ರೂಪಾಯಿಗಳನ್ನು ರೆಕವರಿ ಮಾಡಿದ್ದಾರೆ. ಈ ರೀತಿ ಹಣ ಸೋರಿಹೋಗುವುದನ್ನು ಸಬ್ ರಿಜಿಸ್ಟ್ರಾರ್ ಲೆವಲ್‌ನಲ್ಲೇ ತಡೆಯಬಹುದು. ಸಬ್ ರಿಜಿಸ್ಟ್ರಾರ್‌ಗಳು ಮಾಡುವ ಕರಪ್ಷನ್ ಕಡಿಮೆ ಮಾಡಿದರೆ ಇನ್ನೂ ಹೆಚ್ಚಿನ ಹಣವನ್ನು ಸರ್ಕಾರಕ್ಕೆ ಬರುವ ಹಾಗೆ ಮಾಡಬಹುದು. ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಸ್ಟ್ರಕ್ಟ್ ಆಗಿ ಕರಪ್ಷನ್‌ನ್ನು ತಡೆಗಟ್ಟಿದರೆ ಈ ರೀತಿ ತೆರಿಗೆಯನ್ನು ಎನ್‌ಹ್ಯಾನ್ಸ್ ಮಾಡುವ ಅವಶ್ಯಕತೆ ಇರುವುದಿಲ್ಲ ಎನ್ನುವುದನ್ನು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಯವರೂ ಸಹ ವಕೀಲರಾಗಿ ಕೆಲಸ ಮಾಡಿದ್ದಾರೆ, ರೆವಿನ್ಯೂ ಮಿನಿಸ್ಟರ್ ಆಗಿ ಕೆಲಸ ಮಾಡಿದ ಅನುಭವ ಇದೆ. ಎಲ್ಲೆಲ್ಲಿ ಲೂಪ್ ಹೋಲ್ಸ್ ಇರುತ್ತವೆಂದು ಅವರಿಗೆ ಗೊತ್ತಿದೆ. ಒಟ್ಟಿನಲ್ಲಿ ಇವರು ತೆರಿಗೆಯನ್ನು ಹೆಚ್ಚು ಮಾಡುವ ಅವಶ್ಯಕತೆ ಇರಲಿಲ್ಲವೆಂದು ನಾನು ಭಾವಿಸುತ್ತೇನೆ. ಆದುದರಿಂದ, ಈ ತಿದ್ದುಪಡಿ ವಿಧೇಯಕವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ:

ಶ್ರೀ ಎ. ಲಕ್ಷ್ಮೀಸಾಗರ್.—ಈ ತಿದ್ದುಪಡಿ ಮಾಡುವುದರಿಂದ ಸರ್ಕಾರಕ್ಕೆ ಇನ್ನೂ ೫ ಕೋಟಿ ರೂಪಾಯಿಗಳಷ್ಟು ಹೆಚ್ಚು ವರಮಾನ ಬರುತ್ತದೆ. ನಾನು ವಕೀಲನಾಗಿ ಕೆಲಸ ಮಾಡಿದಂದಿನಿಂದಲೂ ಅಗ್ರಿಮೆಂಟ್ ಪೇಪರಿನ ಬೆಲೆ ೫ ರೂಪಾಯಿಗಳೇ ಇದೆ. ೩೦ ವರ್ಷಗಳಿಂದಲೂ ಅದನ್ನು ಹೆಚ್ಚು ಮಾಡಿಲ್ಲ. ಈಗ ರೂಪಾಯಿಯ ಬೆಲೆ ಏನು ಇದೆ ಅದಕ್ಕೆ ಸರಿಯಾಗಿ ಬೆಲೆಯನ್ನು ಹೆಚ್ಚಿಸುವ ರೀತಿಯಲ್ಲಿ ಈ ತೆರಿಗೆಯನ್ನು ಹೆಚ್ಚು ಮಾಡಿದ್ದೇವೆ. ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಹಣ ಸೋರಿ ಹೋಗುವುದನ್ನು ತಡೆಗಟ್ಟಬೇಕೆಂದು ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ, ಅದನ್ನು ತಪ್ಪಿಸುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳಿ ಈ ತಿದ್ದುಪಡಿ ವಿಧೇಯಕಕ್ಕೆ ತಾವು ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ —ಮಾನ್ಯ ಅಧ್ಯಕ್ಷರೇ. ಸ್ಟ್ಯಾಂಪ್ ವೆಂಡರ್‌ಗಳು ಜನಗಳಿಂದ ಹೆಚ್ಚು ದುಡ್ಡು ತೆಗದುಕೊಂಡು ಸ್ಟ್ಯಾಂಪ್‌ಕಾಗದವನ್ನು ಮಾರಾಟ ಮಾಡುತ್ತಾರೆ. ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲೇ ಸ್ಟ್ಯಾಂಪುಗಳನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಿದರೆ ಹೆಚ್ಚು ಪರ್ಸೆಂಟೇಜ್ ಕೊಟ್ಟು ಕೊಂಡು ಕೊಳ್ಳುವುದನ್ನು ತಪ್ಪಿಸಬಹುದು. ಸ್ಟ್ಯಾಂಪ್ ವೆಂಡರ್‌ಗಳು ತೆಗೆದುಕೊಳ್ಳುತ್ತಿರುವ ಪರ್ಸೆಂಟೇಜ್‌ನ್ನು ತಪ್ಪಿಸಿದರೆ ಸಾಕು ಈಗ ನೀವು ಹೆಚ್ಚು ಮಾಡುತ್ತಿರುವ ತೆರಿಗೆಗಿಂತ ಹೆಚ್ಚು ಹಣ ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ, ಮಾನ್ಯ ಸಚಿವರು ಇದರ ಬಗ್ಗೆ ಯೋಚನೆ ಮಾಡಿ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲೇ ಸ್ಟ್ಯಾಂಪ್‌ನ್ನು ಮಾರುವ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಸಲಹೆಯನ್ನು ನಾನು ಯೋಚನೆ ಮಾಡುತ್ತೇನೆ.

ಅಧ್ಯಕ್ಷರು.—ಈಗ ತಿದ್ದುಪಡಿ ವಿಧೇಯಕವನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ.—

"೧೯೮೭ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕ" ವನ್ನು ಪರ್ಯಾಲೋಚಿಸಬಹುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ.೨

ಅಧ್ಯಕ್ಷರು.—ಖಂಡ ೨ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ಕ್ಕೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).—"೧೯೮೭ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕ" ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೮೭ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕ"ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು, ವಂತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕ (ಪರ್ಯಾಲೋಚನಾ ಪ್ರಸ್ತಾವ)

ಶ್ರೀ. ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ತಾವುಗಳು, ೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಕರೆಕ್ಟೆಡ್ ಕಾಪಿ ಕೊಟ್ಟ ಮೇಲೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ. ಈಗ ತೆಗೆದುಕೊಳ್ಳಬಹುದು, ಎಲ್ಲರಿಗೂ ಪ್ರತಿಯನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲರಿಗೂ ತಿದ್ದಿದ ಪ್ರತಿಯನ್ನು ಕೊಟ್ಟಿದ್ದೀರಾ ?

ಶ್ರೀ. ಎ. ಲಕ್ಷ್ಮೀಸಾಗರ್.—ಹೌದು, ಎಲ್ಲರಿಗೂ ಕೊಟ್ಟಿದ್ದೇವೆ.

ಅಧ್ಯಕ್ಷರು.—ಎಲ್ಲರಿಗೂ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಒಪ್ಪಿಗೆ ಇದ್ದರೆ ನಮ್ಮ ಆಭ್ಯಂತರವಿಲ್ಲ. ಈ ಮನೆಯ ಎಲ್ಲಾ ಸದಸ್ಯರಿಗೂ ಅದಂ ತಲುಪಬೇಕು ಎಂದು ನಾನು ಕೇಳಿಕೊಳ್ಳುವುದು.

ಅಧ್ಯಕ್ಷರು.—ಎಲ್ಲರಿಗೂ ಕೊಟ್ಟಿದ್ದಾರೆ. ತಮಗೆ ಅದಕ್ಕಾಗಿ ಸಮಯ ಕೊಟ್ಟಿದ್ದಾರೆ ತಾವುಗಳು ಅದರ ಮೇಲೆ ಮಾತನಾಡಬಹುದು. ಮಾನ್ಯ ಮಂತ್ರಿಯವರು ವಿಧೇಯಕವನ್ನು ಮಂಡಿಸಬೇಕಂ.

ಶ್ರೀ ಎಂ. ಎಸ್. ಕೃಷ್ಣನ್.—ಈ ವೃತ್ತಿ ತೆರಿಗೆಯನ್ನು ಹೆಚ್ಚು ಮಾಡುವಂಥ ಹವ್ಯಾಸ ಜನತಾ ಪಕ್ಷದ ಸರ್ಕಾರ ಬಂದ ಮೇಲೆ ಹೆಚ್ಚು ಹೆಚ್ಚು ಆಗಿದೆ. ವೃತ್ತಿ ತೆರಿಗೆ ಬಗ್ಗೆ ನನಗೆ ತಿಳಿದ ಮಟ್ಟಿಗೆ ಆನೇಕ ವರ್ಷಗಳಿಂದ ಈ ಬಗ್ಗೆ ಚರ್ಚೆ ನಡೆಯುತ್ತಾ ಇದೆ. ಚರ್ಚೆ ನಡೆದು,ನಡೆದು ಅದು ಚರ್ವಿತಚರ್ವಣ ವಾಗಿದೆ. ಇದನ್ನು ೧೯೭೬ರಲ್ಲಿ ಮೊದಲಬಾರಿಗೆ ತೆಗೆದುಕೊಂಡು ಬಂದಾಗ, ಈ ಬಗ್ಗೆ ಇರುವ ಡಿಬೇಟ್ ನೋಡಿದರೆ ಗೊತ್ತಾಗುತ್ತದೆ ಮಾನ್ಯ ಎಂ.ವೈ. ಘೋರ್ಪಡೆಯವರು ಮಂತ್ರಿಯಾಗಿದ್ದಾಗ ಆಗ ಚರ್ಚೆ ನಡೆಯಿತು, ಆಗ ಅವರು ವೃತ್ತಿ ತೆರಿಗೆ ಹೊಸದೇನೂ ಅಲ್ಲ ಎಂದು ಹೇಳಿದ್ದಾರೆ.